ರಾಣಿಬೆನ್ನೂರು ದೊಡ್ಡ ಕೆರೆಯ ಸುಂದರೀಕರಣ.

1648(2196)

ಶ್ರೀ ಕೋಳಿವಾಡ ಕೃಷ್ಣಪ್ಪ ಭೀಮಪ್ಪ(ರಾಣಿಬೆನ್ನೂರು): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ) ರಾಣಿಬೆನ್ನೂರು ದೊಡ್ಡಕೆರೆಯ ಸುಂದರೀಕರಣ ಮಾಡುವ ಪ್ರಸ್ತಾವನೆಯು ಯಾವ ಹಂತದಲ್ಲಿದೆ?

ಆ) ಈ ವರ್ಷ ಸುಂದರೀಕರಣಕ್ಕೆ ಮಂಜೂರು ಮಾಡಿ ಕಾರ್ಯ ಪ್ರಾರಂಭಿಸಲಾಗುವುದೇ?

ಶ್ರೀ ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ ಮತ್ತು ಆ) ಈ ಯೋಜನೆಗಾಗಿ 7.33 ಕೋಟಿ ರೂ.ಗಳಿಗೆ ರೇಖಾ ಅಂದಾಜು ತಯಾರಿಸಿದ್ದು, ತಾಂತ್ರಿಕ ಶಕ್ಯತೆ ಮತ್ತು ಆರ್ಥಿಕ ಶಕ್ಯತೆ ಆಧರಿಸಿ ಸಣ್ಣ ನೀರಾವರಿ ಇಲಾಖೆಗೆ ವರ್ಷಂಪ್ರತಿ ನೀಡುವ ಅನುದಾನವು ಈಗಾಗಲೇ ಕೈಗೆತ್ತಿಕೊಂಡಿರುವ ಕಾಮಗಾರಿಗಳಿಗೆ ಸಾಲುತ್ತಿಲ್ಲವಾದುದರಿಂದ, ಸಂಬಂಧಿತ ಇಲಾಖೆಗಳೊಡನೆ ಸಮಾಲೋಚಿಸಿ ಆರ್ಥಿಕ ಮೂಲ ಗುರುತಿಸಬೇಕಾಗಿರುತ್ತದೆ.

ಅಸುಂಡಿ ನಾಲಾ ಕೊಳ್ಳದಲ್ಲಿ ಬ್ರಿಡ್ಜ್ ಕಟ್ಟುವ ಕಾರ್ಯ.

1649(2195)

ಶ್ರೀ ಕೋಳಿವಾಡ ಕೃಷ್ಣಪ್ಪ ಭೀಮಪ್ಪ (ರಾಣಿಬೆನ್ನೂರು): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ) ಅಸುಂಡಿನಾಲಾ ಕೊಳ್ಳದಲ್ಲಿ ಬ್ರಿಡ್ಜ್ ಕಟ್ಟುವ ಪ್ರಸ್ತಾವನೆಯು ಸರ್ಕಾರದಲ್ಲಿದೆಯೇ?

ಆ) ಇದ್ದರೆ ಯಾವ ಹಂತದಲ್ಲಿದೆ?

ಇ) ಈ ವರ್ಷ ಬ್ರಿಡ್ಜ್ ಕಟ್ಟುವುದಕ್ಕೆ ಹಣವನ್ನು ಒದಗಿಸಲಾಗುವುದೇ?

ಎಸ್.ಕುಮಾರ್ ಬಂಗಾರಪ್ಪ(ಸಣ್ಣ ನೀರಾವರಿ ಸಚಿವರು):

ಅ ಮತ್ತು ಆ) ಈ ಪ್ರಸ್ತಾವನೆ ಪ್ರಾಥಮಿಕ ತನಿಖಾ ವರದಿ ತಯಾರಿಕಾ ಹಂತದಲ್ಲಿದೆ.

ಇ) ಉದ್ಭವಿಸುವುದಿಲ್ಲ.

ರಾಣಿಬೆನ್ನೂರು ತಾಲ್ಲೂಕಿನಲ್ಲಿ ಹರಿಯುವ ಕುಮದ್ವತಿ ನದಿಗೆ ಬ್ರಿಡ್ಜ್ ಕಂ ಬ್ಯಾರೇಜ್ ಕಟ್ಟುವುದು.

1650(2194)

ಶ್ರೀ ಕೋಳಿವಾಡ ಕೃಷ್ಣಪ್ಪ ಭೀಮಪ್ಪ (ರಾಣಿಬೆನ್ನೂರು): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಣಿಬೆನ್ನೂರು ತಾಲ್ಲೂಕಿನಲ್ಲಿ ಹರಿಯುವ ಕುಮದ್ವತಿ ನದಿಗೆ ಕುಪ್ಪೇಲೂರು ಹತ್ತಿರ ಹಾಗೂ ಮುಷ್ಟೂರು ಗ್ರಾಮದ ಹತ್ತಿರ ಅಡ್ಡಗೋಡೆ ಕಟ್ಟುವ (ಬ್ರಿಡ್ಜ್ ಕಂ ಬ್ಯಾರೇಜ್) ಪ್ರಸ್ತಾವನೆಯು ಸರ್ಕಾರಕ್ಕೆ ಬಂದಿದೆಯೇ;

ಆ) ಪ್ರಸ್ತಾವನೆ ಬಂದಿದ್ದರೆ ಯಾವ ಹಂತದಲ್ಲಿದೆ;

ಇ) 2001-2002ನೇ ಸಾಲಿನಲ್ಲಿ ಇವುಗಳನ್ನು ಮಂಜೂರು ಮಾಡಲಾಗುವುದೇ?

ಶ್ರೀ ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ ಮತ್ತು ಆ) ಈ ಪ್ರಸ್ತಾವನೆ ಪ್ರಾಥಮಿಕ ತನಿಖಾ ವರದಿ ತಯಾರಿಕೆ ಹಂತದಲ್ಲಿದೆ.

ಇ) ತಾಂತ್ರಿಕ ಶಕ್ಯತೆ, ಅನುದಾನ ಲಭ್ಯತೆ ಆಧರಿಸಿ ನಿರ್ಧರಿಸಲಾಗುವುದು.

ಜಲಸಂವರ್ಧನೆ ಯೋಜನೆಗೆ ಕೇಂದ್ರ ಸರ್ಕಾರದ ಅನುಮತಿ ದೊರಕದಿರುವುದು.

1651(1800)

ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆರೆಯ ಹೂಳೆತ್ತಲು ಸರ್ಕಾರ ರೂಪಿಸಿರುವ ಜಲಸಂವರ್ಧನೆ ಯೋಜನೆಗೆ ವಿಶ್ವ ಬ್ಯಾಂಕಿನಿಂದ ಎಷ್ಟು ಧನಸಹಾಯ ನೆರವನ್ನು ಕೋರಲಾಗಿದೆ ಹಾಗೂ ವಿಶ್ವಬ್ಯಾಂಕ್